# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 502

2) ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ)

3) ಉತ್ತರಿಸುವ ದಿನಾಂಕ : 11/12/2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರಿ ದಟ್ಟಣೆಯನ್ನು ನಿಯಂತ್ರಿಸಲು ಹೆಚ್ಚುವರಿ ಸಂಚಾರಿ ಠಾಣೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು); | ಮಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರಿ ದಟ್ಟಣೆಯನ್ನು ನಿಯಂತ್ರಿಸಲು ಮತ್ತು ಪ್ರಸ್ತುತ ಬಜಪೆ ಠಾಣಾ ಸರಹದ್ದಿನ ಕೆಲವು ಭಾಗಗಳನ್ನು ಅಂತರ್ ರಾಷ್ಟ್ರೀಯ ವಿಮಾನ ಸುತ್ತಲಿನ ಪ್ರದೇಶ ಸೇರಿಸಿ ಹೆಚ್ಚುವರಿ ಸಂಚಾರಿ ಠಾಣೆಯ ಸೃಜನೆಯ ಕುರಿತು ಪ್ರಸ್ತಾವನೆಯು ಇಲಾಖಾ ಪರಿಶೀಲನೆಯಲ್ಲಿದೆ. |
| ಆ) | ಮಂಗಳೂರು ನಗರದಲ್ಲಿ ಸಂಚಾರಿ ಪೊಲೀಸ್ ಸಿಬ್ಬಂದಿಗಳ ಕೊರತೆಯಿಂದ ಅಪಘಾತ ಸಂಭವಿಸುತ್ತಿರುವುದು ಹಾಗೂ ಸಂಚಾರಿ ದಟ್ಟಣೆ ಉಂಟಾಗುತ್ತಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ತೊಂದರೆಗಳನ್ನು ನಿವಾರಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು); | ಪ್ರಸ್ತುತ ಮಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ 04 ಸಂಚಾರ ಪೊಲೀಸ್ ಠಾಣೆಗಳಲ್ಲಿ ಒಟ್ಟು 34 ಹುದ್ದೆಗಳ ರಿಕ್ತಸ್ಥಾನವಿದ್ದು, ಮಂಗಳೂರು ನಗರದಲ್ಲಿ ಈಗಿರುವ ಸಿಬ್ಬಂದಿಗಳನ್ನು ಸಂಚಾರ ಪಾಯಿಂಟ್‌ಗಳಿಗೆ ನೇಮಿಸಿ, ವಾಹನಗಳ ಮತ್ತು ಸಾರ್ವಜನಿಕರ ಸುಗಮ ಸಂಚಾರ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ.<br><br>ಸಂಚಾರ ದಟ್ಟಣೆಯು ನಿಗದಿತ ಅವಧಿಯಲ್ಲಿ ಮಾತ್ರ ಉಂಟಾಗುತ್ತಿದ್ದು, ಉಳಿದ ಸಮಯದಲ್ಲಿ ಸಂಚಾರ ಸುಗಮವಾಗಿರುತ್ತದೆ.<br><br>ಮಂಗಳೂರು ನಗರದಲ್ಲಿ ಅಪಘಾತ ಸಂಭವಿಸುವುದನ್ನು ತಡೆಗಟ್ಟುವ ಬಗ್ಗೆ ಚಾಲಕರುಗಳಿಗೆ ಸಾರ್ವಜನಿಕರಿಗೆ ಸಂಚಾರ ನಿಯಮಗಳನ್ನು ಪಾಲಿಸುವ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವ ವಾಹನ ಚಾಲಕರುಗಳ ವಿರುದ್ಧ ಮೋಟಾರು ವಾಹನ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>ಸಂಚಾರ ನಿಯಮ ಉಲ್ಲಂಘನೆ ಮಾಡಿ ಅಪಘಾತಕ್ಕೆ ಕಾರಣವಾಗುವ ವಾಹನ ಚಾಲಕರುಗಳ ಮೇಲೆ ಕಾನೂನು ರೀತ್ಯ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>Smart City ವತಿಯಿಂದ ಮಂಗಳೂರು ನಗರದಲ್ಲಿ Smart Pole ಅಳವಡಿಸಲಾಗಿದ್ದು, ಅದರಲ್ಲಿ AI Camera ಅಳವಡಿಸಿ ಸಾರ್ವಜನಿಕರಲ್ಲಿ ಮತ್ತು ವಾಹನ ಚಾಲಕರುಗಳಲ್ಲಿ ಸಂಚಾರ ನಿಯಮದ ಬಗ್ಗೆ ಜಾಗೃತಿ |

| | | |
|---|---|---|
| | | ಮೂಡಿಸುವುದಲ್ಲದೆ ಉಲ್ಲಂಘನೆ ಮಾಡುವ ವಾಹನಗಳ ಮೇಲೆ ನಿಗಾ ಇಡಲು ಕ್ಯಾಮರಾಗಳನ್ನು ಬಳಸಿಕೊಳ್ಳಲಾಗುತ್ತಿದೆ. |
| ಇ) | ಸಂಚಾರಿ ಸುಗಮಕ್ಕೆ ಮಂಗಳೂರು ನಗರ ಪೊಲೀಸರ ಮುಂದಿರುವ ಯೋಜನೆಗಳ ವಿವರ ನೀಡುವುದು? | ರಾಜ್ಯ ರಸ್ತೆ ಸುರಕ್ಷತಾ ನಿಧಿಯಡಿಯಲ್ಲಿ ಸಂಚಾರ ಮತ್ತು ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ರೂ.93.55 ಕೋಟಿ ಮೊತ್ತದ 2025-26ನೇ ಸಾಲಿನ ಕ್ರಿಯಾ ಯೋಜನೆಗೆ ದಿನಾಂಕ: 25.08.2025ರ ಆದೇಶದನ್ವಯ ಮಂಜೂರಾತಿಯನ್ನು ನೀಡಿದ್ದು, ಮಂಗಳೂರು ನಗರ ಘಟಕಕ್ಕೆ ರೂ.35.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ.<br><br>ಸುಗಮ ಸಂಚಾರಕ್ಕಾಗಿ ಪ್ರಮುಖ ಜಂಕ್ಷನ್‌ಗಳಾದ ಎಸ್.ಬಿ.ಐ. ಜಂಕ್ಷನ್, ಡಾ\|\|ಅಂಬೇಡ್ಕರ್ ಜಂಕ್ಷನ್‌ನಲ್ಲಿ ಜಂಕ್ಷನ್ ಅಭಿವೃದ್ಧಿಗಾಗಿ ಎನ್.ಐ.ಟಿ.ಕೆ ತಜ್ಞರ ಸಹಕಾರದಿಂದ ವರದಿಯನ್ನು ಪಡೆದು ಎಂ.ಸಿ.ಸಿ.ಗೆ ಪಸ್ತಾವನೆ ಸಲ್ಲಿಸಿದ್ದು, ರಸ್ತೆ ಅಪಘಾತಗಳನ್ನು ತಡೆಗಟ್ಟುವ ಸಲುವಾಗಿ ರಸ್ತೆ ಉಬ್ಬುಗಳು, ರಂಬರ್ಸ್ ಕ್ಯಾಟ್ ಐಸ್, ಸೂಚನಾ ಫಲಕಗಳು, ಸಂಚಾರಿ ಸಲಕರಣೆಗಳನ್ನು ಅಳವಡಿಸಲು ಎನ್.ಹೆಚ್.ಎ.ಐ.ರವರಿಗೆ ಪತ್ರವನ್ನು ಬರೆಯಲಾಗಿದೆ. |

**ಸಂಖ್ಯೆ: ಹೆಚ್‌ಡಿ 227 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.